**ಓ.ಎಸ್ ನಂ. 08 /2018 ಪಿ.ಡಬ್ಲ್ಯೂ-1 (ನಾಗರಾಜು)**

**ಸಾಕ್ಷಿಯನ್ನು ದಿನಾಂಕಃ 18.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರವರ ಪರ ವಕೀಲರಾದ ಶ್ರೀ N.R ವಕೀಲರಿಂದಃ**

1. ನಾನು ದಾವೆ ಸಲ್ಲಿಸುವ ಸಮಯದಲ್ಲಿ ಪರ್ಯಾಯ ಪರಿಹಾರವನ್ನು ನನ್ನ ದಾವಾ ಪ್ರಾರ್ಥನೆಯಲ್ಲಿ ಕೇಳಿರುದಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಯು ವಾದಿ ಮತ್ತು ಪ್ರತಿವಾದಿಗಳ ವಿಚಾರಣೆ ಎಲ್ಲಾ ಮುಗಿದು ವಾದ ಮಂಡನೆಗೆ ನಿಗಧಿಯಾಗಿರುತ್ತದೆ ಎಂದರೆ ಸರಿ. ನಂತರದಲ್ಲಿ ದಾವೆಯನ್ನು ತಿದ್ದುಪಡಿ ಮಾಡಿ ದಾವಾ ಪ್ರಾರ್ಥನೆಯಲ್ಲಿ ಇನ್ನೊಂದು ಪರಿಹಾರ ಕೇಳಿಕೊಂಡಿರುತ್ತೇನೆ ಎಂದರೆ ಸರಿ. ಮೋಸದಿಂದ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದು ಕೊನೆಯಲ್ಲಿ ಹಣವಾದರೂ ಬರಲಿ ಎಂದು ಪ್ರಾರ್ಥನೆಯನ್ನು ತಿದ್ದುಪಡಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿರವರು ಹೆಚ್.ಡಿ. ಕೋಟೆ ತಾಲ್ಲೂಕು, ನೂರಲಕುಪ್ಪೆ ಗ್ರಾಮದವರು ಎಂದರೆ ಸರಿ. ಅದೇ ಗ್ರಾಮದ ಶಾರದಮ್ಮ, ಎನ್ ಕೆ ಕೆಂಪೇಗೌಡ, ಬೀರೇಶ್ ಎಂ. ಕೆ. ರವರ ಪರಿಚಯ ಇರುತ್ತದೆ, ಅವರು 1 ನೇ ಪ್ರತಿವಾದಿಯವರಿಂದಲೇ ಪರಿಚಯವಾಗಿರುತ್ತಾರೆ. ಶಾರದಮ್ಮ ರವರು ಕೆಂಪೇಗೌಡರ ಹೆಂಡತಿ ಎಂದರೆ ಸರಿ. ಬೀರೇಶ್ ಮತ್ತು ಕೆಂಪೇಗೌಡ ರವರ ಶಾರದಮ್ಮನವರ ಮಕ್ಕಳು ಎಂದರೆ ಸರಿ. ಸದರಿ ಶಾರದಮ್ಮ, ಕೆಂಪೇಗೌಡ ಮತ್ತು ಬೀರೇಶ್ ರವರಿಗೂ ಸಹ ಹಣದ ಸಾಲ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಅವರಿಗೆ ಹಣದ ಸಹಾಯ ಮಾಡಿರುತ್ತೇನ ಎಂದು ನುಡಿಯುತ್ತಾರೆ. ಅವರಿಗೆ ಹಣದ ಸಹಾಯ ಮಾಡಿರುವುದಿಲ್ಲ ಸಾಲವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸದರಿರವರುಗಳಿಂದ ಖಾಲಿ ಪತ್ರಗಳಲ್ಲಿ ಸಹಿಯನ್ನು ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ನಾನು ಅವರಿಂದ ಚೆಕ್ಕನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಅವರಿಂದ ಖಾಲಿ ಪತ್ರದಲ್ಲಿ ಪಡೆದ ಸಹಿಯನ್ನು ಸಹಿಯನ್ನು ಉಪಯೋಗಿಸಿಕೊಂಡು ಅವರ ಜಮೀನಿಗೆ

ಸಂಬಂಧಿಸಿದಂತೆ ನೊಂದಾಯಿತ ವಲ್ಲದ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ನಾನು ಕೊಟ್ಟ ಹಣಕ್ಕೆ ಭದ್ರತೆಗಾಗಿ ಅವರೇ ಕರಾರುಪತ್ರ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿಗೆ ದಿಃ01.10.2012 ರಂದು ಶಾರದಮ್ಮ, ಕೆಂಪೇಗೌಡ ಮತ್ತು ಬೀರೇಶ್ ರವರ ಮಧ್ಯೆ ಮಾಡಿಕೊಂಡ ಕರಾರು ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಒಪ್ಪಿಕೊಂಡಿದ್ದು ಅದನ್ನು ಗುರುತಿಸುವ ಸಲುವಾಗಿ ನಿಡಿ 2 ಎಂದು ಗುರುತಿಸಲಾಯಿತು. ಶಾರದಮ್ಮ ರವರ ಮೇಲೆ ಚೆಕ್ಕು ಅಮಾನ್ಯಗೊಂಡ ಬಗ್ಗೆ ಕೆ. ಆರ್.ಪೇಟೆ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತೇನೆ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ಪ್ರತಿವಾದಿ 1 ರವರು ಶಾರದಮ್ಮ, ಮತ್ತು ಕೆಂಪೇಗೌಡ ರವರನ್ನು ಸಾಕ್ಷಿ ಮಾಡಿಸುವ ಸಲುವಾಗಿ ಸಾಕ್ಷಿ ಪಟ್ಟಿಯನ್ನು ಸಲ್ಲಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ಕೆಂಪೇಗೌಡರವರು ಸಾಕ್ಷಿ ಕೊಡುವ ಮೊದಲೇ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಇತ್ತೀಚೆಗೆ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಶಾರದಮ್ಮ ರವರನ್ನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯದಂತೆ ನಾನೇ ಎದುರುಸಿ ಅವರು ಬಾರದ ಹಾಗೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಜನರಿಗೆ ಸಾಲವನ್ನು ಕೊಟ್ಟು ಅವರಿಂದ ಖಾಲಿ ಪತ್ರಕ್ಕೆ ಸಹಿ ಪಡೆದುಕೊಂಡು ಅದನ್ನು ಕರಾರು ಪತ್ರವಾಗಿ ಪರಿವರ್ತಿಸಿ ಅದನ್ನು ನ್ಯಾಯಾಲಯದಲ್ಲಿ ಅವರ ವಿರುದ್ದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ